(ಈ) ಮೈಸೂರು ಆಲನ ಹಳ್ಳಿಯಲ್ಲಿ ಹೆಣ್ಣು ಮಗಳ ಕೊಲೆ

+ ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಅಧ್ಯಕ್ಷರೇ, ಮೈಸೂರಿನ ಆಲನಹಳ್ಳಿಯಲ್ಲಿ ಒಂದು ಹೆಣ್ಣುಮಗುವಿನ ಕೊಲೆಯಾಗಿದೆ. ಈಗ ಹೆಣ್ಣುಮಕ್ಕಳನ್ನು ಸಾಕಿ ಸಲುಹಿ ಮದುವೆ ಮಾಡಿ ಕಳುಹಿಸಿದ ನಂತರ ಕೆಲವೊಂದು ಸಂದರ್ಭಗಳಲ್ಲಿ ಇದು ದುರಂತವಾಗುತ್ತಿದೆ. ಗಿಳಿಯಾಗಿ ಸಾಕಿ ಗಿಡಗನಿಗೆ ಕೊಟ್ಟ ಹಾಗೆ ಇಂದು ಆಗುತ್ತಿದೆ. ಅಂದರೆ 'ಗಿಳಿಯ ಮರಿಯನು ತಂದು ಪಂಜರದೊಳಗೆ ಪೂಜಿಸಿ ಮೃದು ನುಡಿಗಳಾಲಿಸಿ ಕೇಳೋ ಮನುಜ' ಎಂದು ಹೇಳಿದ್ದಾರೆ. ಇಲ್ಲಿ ಗಿಳಿಯ ಹಾಗೆ ಹೆಣ್ಣುಮಗುವನ್ನು ಸಾಕಿ ಗಿಡಗನಿಗೆ ಕೊಟ್ಟ ಹಾಗೆ ಆಗಿದೆ. ಆಕೆಯ ಗಂಡನಿಗೆ ವರದಕ್ಷಿಣೆ ಎಂದು 50 ಗ್ರಾಂ ಚಿನ್ನವನ್ನು ಕೊಡಲಾಗಿದೆ. ಇದಲ್ಲದೇ 25 ಸಾವಿರ ರೂ.ಗಳನ್ನು ನಗದಾಗಿ ಮತ್ತು ಒಂದು ನಿವೇಶನವನ್ನೂ ಕೂಡ ಕೊಡಲಾಗಿದೆ. ಇಷ್ಟು ವರದಕ್ಷಿಣೆ ಕೊಟ್ಟಿದ್ದರೂ ಕೂಡ 14ನೇ ತಾರೀಖು ಈ ರೀತಿಯ ಭೀಕರ ದುರಂತ ನಡೆದಿದೆ. ಒಂದು ವೇಳೆ ಆ ಹೆಣ್ಣು ಮಗಳು ನೇಣು ಹಾಕಿಕೊಂಡು ಸತ್ತಿದ್ದರೆ ಕೈಗಳು ಸೀದಾ ಆಗಿರಬೇಕಾಗಿತ್ತು ಮತ್ತು ನಾಲಿಗೆ ಹೊರ ಚಾಚಿರಬೇಕಾಗಿತ್ತು. ಮತ್ತು ಕಚ್ಚಬೇಕಾಗಿತ್ತು. ಆದರೆ ಕೈ ಈ ಫೋಟೋದಲ್ಲಿರುವ ಹಾಗೆ ಇತ್ತು ಇದನ್ನು ಪೊಲೀಸಿನವರು ಫೋಟೋ ತೆಗೆದಿದ್ದಾರೆ. ಆ ಹೆಣ್ಣು ಮಗಳ ತಂದೆಯ ದುಃಖವನ್ನಂತೂ ಹೇಳುವುದಕ್ಕೆ ಅಸಾಧ್ಯವಾಗುತ್ತದೆ, ಅವರು ನನ್ನ ಬಳಿ ಬಂದು ಕಾಲಿಗೆ ಬಿದ್ದುಬಿಟ್ಟರು, ಏಕೆಂದರೆ ಈ ಕೊಲೆಯ ಬಗ್ಗೆ ಪೊಲೀಸಿನವರು ಆಕೆ ನೇಣುಹಾಕಿಕೊಂಡು ಸತ್ತಿದ್ದಾಳೆ ಎಂದಿದ್ದಾರೆ. ಇದು ನಿಜವಾಗಲೂ ದುರ್ದೈವವಾದ ಹೇಳಿಕೆಯಾಗಿದೆ. ಏಕೆಂದರೆ ಅವರುಗಳು ಈ ಹೆಣ್ಣುಮಗಳ ಪಾಲಿಗೆ ಯಮದೂತರಾಗಿದ್ದಾರೆ. ಆ ಹೆಣ್ಣುಮಗಳ ತಂದೆತಾಯಿಗಳು ಬಹಳ ದುಃಖದಿಂದ ನನ್ನ ಬಳಿ ಹೇಳಿದರು. ಈ ಘಟನೆ ನಡೆದಿರುವ ಕ್ಷೇತ್ರ ನನ್ನ ಕ್ಷೇತ್ರವಲ್ಲದಿದ್ದರೂ ಕೂಡ ನಾನು ಬಹಳ ದುಃಖದಿಂದ ಹೇಳಬೇಕಾಗಿದೆ. ಕೆ.ಎಸ್.ಆರ್.ಪಿ.ಯಲ್ಲಿ ಸಬ್ ಇನ್ಸ್‌ಪೆಕ್ಟರ್ ಆಗಿರುವ ವ್ಯಕ್ತಿಯ ಮಗಳು ಈ ಹೆಣ್ಣುಮಗಳು. ಈ ಸಬ್-ಇನ್ಸ್‌ಪೆಕ್ಟರ್‌ರವರ ಹೆಂಡತಿ ಬಹಳ ಆಘಾತಕ್ಕೆ ಒಳಗಾಗಿ ಬಹುಶಃ ಹೃದಯಾಘಾತವಾಗುತ್ತದೇನೋ ಎನ್ನುವ ದೃಷ್ಟಿಯಲ್ಲಿ ತೊಳಲಾಡುತ್ತಿದ್ದಾರೆ. ಏಕೆಂದರೆ ಪೊಲೀಸಿನವರು ಈ ಘಟನೆಯ ಬಗ್ಗೆ ತಿರುಚಿ ಇದು ಸಹಜವಾದ ಸಾವು ಎಂದು ಹೇಳುತ್ತಿದ್ದಾರೆ. ಆದುದರಿಂದ ಈ ಘಟನೆ ಬಗ್ಗೆ ಸಿ.ಓ.ಡಿ ತನಿಖೆಯನ್ನು ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಈ ಘಟನೆಯಲ್ಲಿ ಯಾರು ತಪ್ಪಿತಸ್ಥರಿದ್ದಾರೆ ಅವರಿಗೆ ಕಠಿಣವಾದ ಶಿಕ್ಷೆಯಾಗಬೇಕೆಂದು ನಾನು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಆರ್.ರೋಷನ್ ಬೇಗ್:(ಗೃಹ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ಘಟನೆ ನಡೆದಿರುವುದು ನಿಜವಾಗಿದೆ. ದಿನಾಂಕ 16ನೇ ತಾರೀಖು ಸಬ್ ಇನ್ಸ್‌ಪೆಕ್ಟರ್‌ರವರಾದ ವೆಂಕಟರಮಣ ಎಂಬುವರು ತಮ್ಮ ಮಗಳನ್ನು ಈ ರೀತಿಯಲ್ಲಿ ಕೊಲೆ ಮಾಡಿದ್ದಾರೆ

ಎಂಬ ಬಗ್ಗೆ ದೂರನ್ನು ಕೊಟ್ಟಿದ್ದಾರೆ. ಈ ಸಂಬಂಧ ತಕ್ಷಣ ಪೊಲೀಸಿನವರು ಕೇಸ್ ರಿಜಿಸ್ಟರ್ ಮಾಡಿಕೊಂಡು ಕ್ರೈಮ್ ನಂಬರ್ 177/97 ಅಂತರ್ ಸೆಕ್ಷನ್ 498 (ಎ), 304 (ಬಿ), ಐಪಿಸಿ ರೆಡ್ ವಿತ್ 3 ಅಂಡ್ 4 ಪ್ರಕಾರ ಕೇಸ್ ರಿಜಿಸ್ಟರ್ ಮಾಡಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಕೇಸ್ ರಿಜಿಸ್ಟರ್ ಮಾಡಿ ಇನ್‌ವೆಸ್ಟಿಗೇಟ್ ಮಾಡುತ್ತಿದ್ದಾರೆ. ಈ ಕೇಸ್‌ನ ಸಂಬಂಧ ಆ ಹೆಣ್ಣುಮಗಳ ಗಂಡ (ಗೋಪಾಲರಾವ್) ಮತ್ತು ಅತ್ತೆಯನ್ನು 16ನೇ ತಾರೀಖು ಅರೆಸ್ಟ್ ಮಾಡಿ ಕೋರ್ಟ್ ಮುಂದೆ ಪ್ರೊಡ್ಯೂಸ್ ಮಾಡಿದ್ದಾರೆ. ಅವರುಗಳು 17ನೇ ತಾರೀಖು ಜ್ಯುಡಿಷಿಯಲ್ ಕಸ್ಟಡಿಗೆ ರಿಮ್ಯಾಂಡ್ ಆಗಿದ್ದಾರೆ. ಇದು ಡೌರಿ ಕೇಸ್‌ನಲ್ಲಿ ಬುಕ್ ಆಗಿದೆ. ಈ ರೀತಿಯ ವರದಕ್ಷಿಣೆ ಕೇಸ್ ಬಗ್ಗೆ ಸಿ.ಓ.ಡಿ.ಗೆ ತಕ್ಷಣ ಹೋಗಿಯೇ ಹೋಗುತ್ತದೆ. ಆಗ ಸಿ.ಓ.ಡಿ ತನಿಖೆಯಾಗೇ ಆಗುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಇನ್ನು ಮುಂದೆ ಮದುವೆಯಾಗುವ ಹೆಣ್ಣುಮಕ್ಕಳ ಗಂಡನಾಗಲೀ ಅಥವಾ ಗಂಡನ ಮನೆಯವರಾಗಲಿ ತೊಂದರೆ ಕೊಟ್ಟಿದ್ದೇ ಆದರೆ ಅವರಿಗೆ ಸರಿಯಾದ ಶಿಕ್ಷೆಯನ್ನು ಕೊಡುವ ಸಂಬಂಧ ಒಂದು ಶಾಸನವನ್ನು ಮಾಡಬೇಕಾಗಿದೆ. ಅಧ್ಯಕ್ಷರೇ, ನಾನು ಕೆಲವೊಂದು ಪೇಪರ್ಸ್‌ಗಳನ್ನು ಮತ್ತು ಭಾವಚಿತ್ರಗಳನ್ನು ನಿಮಗೆ ಈಗಲೇ ಕೊಡುತ್ತೇನೆ.

ಅಧ್ಯಕ್ಷರು: ಶಂಕರಲಿಂಗೇಗೌಡರೇ, ಈಗ ತಮ್ಮ ಸ್ಥಾನಕ್ಕೆ ಹೋಗಿ ಕುಳಿತುಕೊಳ್ಳಿ, ಬೆಳಿಗ್ಗೆ ಎಲ್ಲಾ ಪೇಪರ್ಸ್‌ನ್ನು ಮತ್ತು ಚಿತ್ರಗಳನ್ನು ನನಗೆ ತೋರಿಸಿದ್ದಾರೆ. ನೀವು ಹೇಳಿದ್ದು ನನಗೆ ಅರ್ಥವಾಯಿತು. ವರದಕ್ಷಿಣೆ ಕೇಸ್‌ನಲ್ಲಿ ಬರುವ ಗಂಡಸರಿಗೆ ಸರಿಯಾದ ಶಿಕ್ಷೆ ಕೊಡಬೇಕೆಂದು ನೀವು ಹೇಳಿದಿರಲ್ಲಾ, ಅದರ ಒಳಗಿನ ಅರ್ಥ ನನಗೆ ಸಂಪೂರ್ಣವಾಗಿ ಗೊತ್ತಾಯಿತು. ಅದರ ಬಗ್ಗೆ ಮಂತ್ರಿಗಳಿಗೆ ನಾಳೆ ಹೇಳುತ್ತೇನೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: 'ಯತ್ರನಾರ್ಯಸ್ತು ಪೂಜ್ಯಂತೆ ರಮತೇ ತತ್ರದೇವತಾ' ಎಂದು ಹೆಣ್ಣಿನ ಬಗ್ಗೆ ಹೇಳಲಾಗಿದೆ. ನಮಗೆ ಅಕ್ಕನಾಗಿ, ತಾಯಿಯಾಗಿ, ಮಡದಿಯಾಗಿ, ಮಹಾಮಾತೆಯಾಗಿ ಜಗತ್ತನ್ನು ರಂಜಿಸತಕ್ಕಂಥ ಹೆಣ್ಣು ಮನಸ್ಸಿನ ಬಾಳಿಗೆ ಕಣ್ಣಿದ್ದ ಹಾಗೆ. ಆ ಕಣ್ಣಿಗೆ ಇವೊತ್ತು ಚುಚ್ಚುತ್ತಿದ್ದಾರೆ.

ಅಧ್ಯಕ್ಷರು: ನಾನು ಈಗಾಗಲೇ ಹೇಳಿದ್ದೇನೆ. ನೀವು ಹೇಳಿದ ವಿಚಾರದ ಬಗ್ಗೆ ನಾಳೆ ಮಂತ್ರಿಗಳಿಗೆ ಹೇಳುತ್ತೇನೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: ಸಿ.ಓ.ಡಿ. ತನಿಖೆಯಾಗಬೇಕು.

ಅಧ್ಯಕ್ಷರು: ಈಗಾಗಲೇ ಮಂತ್ರಿಗಳು ಹೇಳಿದ್ದಾರಲ್ಲಾ, ಈಗಾಗಲೇ ಆರೋಪಿಗಳನ್ನು ಕಸ್ಟಡಿಗೆ ತೆಗೆದುಕೊಳ್ಳಲಾಗಿದ್ದು ಅವರು ಜ್ಯುಡಿಷಿಯಲ್ ಕಸ್ಟಡಿಗೆ ಒಳಪಟ್ಟಿದ್ದಾರೆ. ಸಾಮಾನ್ಯವಾಗಿ ವರದಕ್ಷಿಣೆ ಕೇಸ್‌ಗಳು ಸಿ.ಓ.ಡಿ. ಮುಂದೆ ಹೋಗಿಯೇ ಹೋಗುತ್ತದೆ.

ಆದುದರಿಂದ ಸಿ.ಓ.ಡಿ. ತನಿಖೆಯಾಗುತ್ತದೆಂದು ಹೇಳಿದ್ದಾರೆ.

ಶ್ರೀ ಸಿ.ಎಂ.ಲಿಂಗಪ್ಪ: ಇಂದು ಕೋರ್ಟ್‌ನವರೂ ಕೂಡ ಇಂಥ ಕೇಸ್‌ಗಳ ಬಗ್ಗೆ ಬಹಳ ಸಿರಿಯಸ್ಸಾಗಿ ನಿರ್ಣಯಗಳನ್ನು ಕೊಡುತ್ತಿದ್ದಾರೆ. ಕೋರ್ಟ್ ಬಹಳ ಕಾಷಿಯಸ್ ಆಗಿ ಕೆಲಸ ಮಾಡುತ್ತಿವೆ. ಇಂಥ ಕೇಸ್‌ಗಳಲ್ಲಿ ಲಘುವಾಗಿ ಪರಿಗಣಿಸಿ ಬೇಲ್ ಮೇಲೆ ಆರೋಪಿಗಳನ್ನು ಬಿಡುತ್ತಿಲ್ಲ.

ಅಧ್ಯಕ್ಷರು: ಕೋರ್ಟ್ ಕೂಡ ಬಹಳ ಸಿರಿಯಸ್ಸಾಗಿ ಇದನ್ನು ತೆಗೆದುಕೊಳ್ಳುತ್ತದೆ. ಅಫೆಂಡರ್ ಕೂಡ ಬಹಳ ಸೀರಿಯಸ್ಸಾಗಿ ಅವರ ಕೆಲಸವನ್ನು ಮುಂದುವರಿಸಿಕೊಂಡೇ ಹೋಗುತ್ತಿದ್ದಾರೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಈ ಘಟನೆ ಬಗ್ಗೆ ಸಿ.ಓ.ಡಿ. ತನಿಖೆ ಮಾಡಿಸಬೇಕು.

ಅಧ್ಯಕ್ಷರು: ಈಗಾಗಲೇ ಒಪ್ಪಿಸಿಯಾಗಿದೆ.

(ಊ) ಬೆಂಗಳೂರು ಕಂಠೀರವ ಕ್ರೀಡಾಂಗಣದ ಬಳಿ ಸರ್ಕಾರಿ ಭೂಮಿಯನ್ನು ಖಾಸಗೀಯವರು ಒತ್ತುವರಿ ಮಾಡಿಕೊಳ್ಳುತ್ತಿರುವುದು.

+ ಶ್ರೀ ಸಿ.ಎಂ.ಲಿಂಗಪ್ಪ (ರಾಮನಗರ): ಮಾನ್ಯ ಅಧ್ಯಕ್ಷರೇ, ಬೆಂಗಳೂರಿನಲ್ಲಿರತಕ್ಕಂಥ ಸರ್ಕಾರಿ ಭೂಮಿಗಳು ಇತರೆ ಇಲಾಖೆಯ ಅಧೀನದಲ್ಲಿರುವ ಭೂಮಿಗಳು ಹಸ್ತಾಂತರವಾಗುತ್ತಿರುವ ವಿಚಾರದಲ್ಲಿ ಸಹಜವಾಗಿ ಒಂದು ಕುತೂಹಲ ಮೂಡಿ ಅದರ ಬಗ್ಗೆ ಇಲ್ಲಿ ತಮ್ಮ ಮೂಲಕ ಪ್ರಸ್ತಾಪ ಮಾಡಬೇಕೆಂದು ನಮ್ಮ ಆಶಯವನ್ನು ವ್ಯಕ್ತಪಡಿಸುತ್ತಿದ್ದೇವೆ. ಆದರೆ ದುರಾದೃಷ್ಟ, ಇವೊತ್ತು ಬೆಂಗಳೂರು ಪಟ್ಟಣದ ಬಗ್ಗೆ ಜವಾಬ್ದಾರಿ ಹೊತ್ತು ಮಂತ್ರಿಗಳು ಇಲ್ಲಿ ಇಲ್ಲ.

8.40 ಪಿ.ಎಂ

ಬೆಂಗಳೂರನ್ನು ನೋಡಿದಂತಹವರು ಹಿಂದಿನಿಂದಲೂ ಕೂಡ ಈಗಲೂ ಕೂಡ ನಾನಾ ರೀತಿಯಲ್ಲಿ ವ್ಯಾಖ್ಯಾನ ಮಾಡುತ್ತಾರೆ. ಅದು ಒಂದು ಸುಂದರವಾದ ನಗರ, ಗಾರ್ಡನ್ ಸಿಟಿ ಇತ್ಯಾದಿ, ಇತ್ಯಾದಿ. ಇತ್ತೀಚೆಗೆ ಅದು ಗಾರ್ಡನ್ ಸಿಟಿ ಆಗಿ ಉಳಿದಿದೆಯೋ ಅಥವಾ ಕಾಂಕ್ರೀಟ್ ಕಟ್ಟಡಗಳ ಕಾಡಾಗುತ್ತಿದೆಯೋ ಒಂದೂ ಹೇಳುವುದಕ್ಕೆ ಬರುವುದಿಲ್ಲ. ಆದರೆ ಇವತ್ತು ಬೆಂಗಳೂರು ನಗರದಲ್ಲಿ ವಾಹನಗಳ ಚಾಲನೆ ನೋಡಿದಾಗ, ವಾಹನಗಳ ಚಾಲನೆಗೆ ಮತ್ತು ವಾಹನಗಳ ನಿಲುಗಡೆಗೆ ಬಹಳಷ್ಟು ಅನಾನುಕೂಲವಾಗುತ್ತಿದೆ. ರಸ್ತೆ ಬದಿಯಲ್ಲಿ ಕಟ್ಟಡಗಳನ್ನು ಕಟ್ಟುವಾಗ ನಿಯಮಾನುಸಾರವಾಗಿ ರಸ್ತೆ ಮಧ್ಯಭಾಗದಲ್ಲಿ ಇಷ್ಟು ಜಾಗ ಬಿಟ್ಟು ಕಟ್ಟಬೇಕು ಎನ್ನುವ